ಇಷ್ಟಪಡುವ ಎಲ್ಲರಂತೆ ಅವರೂ ಆತನ 'ಪಾಲಿಟಿಕ್ಸ್ ಅಂಡ್ ದಿ ಇಂಗ್ಲಿಷ್ ಲ್ಯಾಂಗ್ವೇಜ್' ಮತ್ತು 'ವೈ ಐ ರೈಟ್' ಎಂಬ ಎರಡು ಪ್ರಸಿದ್ಧ ಲೇಖನಗಳನ್ನು ನೆನೆಯುತ್ತಿದ್ದರು.

ನುಡಿಗಟ್ಟಿನ ಬಗೆಗೆ ಅವರಿಗಿದ್ದ ಸೂಕ್ಷ್ಮಜ್ಞತೆಯ ವಿಷಯದಲ್ಲಿ, ಸುಮಾರು ಮೂವತ್ತು ವರ್ಷಗಳ ಹಿಂದೆ ನಡೆದು ನನ್ನ ಮನಸ್ಸಿನಲ್ಲಿ ನಿಂತುಬಿಟ್ಟಿರುವ ಒಂದು ಸರಳ, ಆದರೆ ಗಹನವಾದ ಪ್ರಸಂಗದ ನೆನಪು ಹೀಗಿದೆ. ಒಮ್ಮೆ ಉಡುಪಿಯ ಕವಿ ಮುದ್ದಣ ಮಾರ್ಗದ ಡಯಾನಾ ಸರ್ಕಲ್ ಬಳಿ ನಾನು ಅವರೂ ಒಂದು ಬೇಕರಿ ತಿನಿಸಿನ ಅಂಗಡಿಯ ಮುಂದೆ ಬಾದಾಮಿ ಹಾಲು ಕುಡಿಯಲು ನಿಂತೆವು. ಆ ಅಂಗಡಿಯಲ್ಲಿ ಬಗೆಬಗೆಯ ತಿನಿಸು ತುಂಬಿ ಸಾಲಾಗಿ ಜೋಡಿಸಿಟ್ಟಿದ್ದ ಗಾಜಿನ ಭರಣಿಗಳ ನಡುವೆ ಒಂದು ಭರಣಿಯ ತುಂಬ ಯಾವುದೋ ಗಿಡದ ಬೀಜಗಳಿದ್ದವು. ಇದೇನು ಎಂದು ನಾನು ಅಂಗಡಿಯವನ್ನು ಕೇಳಿದೆ. ಆತ, ಉಡುಪಿಯ ಕಾಕನಲ್ಲಿ "ಇದಾ? ಇದು ತಂಪು ಬೀಜ!" ಎಂದ. ನಾವು ಮುಖಮುಖ ನೋಡಿಕೊಂಡೆವು. ರಾಜಶೇಖರ ಅವರು, "ಆಹಾ, ಇದರ ಹೆಸರು ನೋಡ್ರಿ, ಎಷ್ಟು ಟ್ರ್ಯಾನ್ಸ್‌ಪರೆಂಟ್ ಆಗಿದೆ! ನಾವು ಏನನ್ನಾದರೂ ಬರೆದರೆ, ಮಾತಾಡಿದರೆ ನಮ್ಮ ಭಾಷೆಯೂ ಹಾಗಿರಬೇಕು. ಬಿನ್ನಾಸು, ಒಡಿವಾರ ಇರಬಾರದು. ತಂಪು ಬೀಜ! ಹೆಸರೂ ಅದೇ, ವಿವರಣೆಯೂ ಅದೇ. ಸ್ವಭಾವದ ಕಾಣಿಕೆ ಹೆಸರಿನಲ್ಲಿಯೆ ಇದೆ. ಹಾಗಿರಬೇಕು ನಾವು," ಎಂದು ಆಹ್ಲಾದಗೊಂಡರು.

ಆ ಬಗೆಯ ಪಾರದರ್ಶಕತೆ, ಘನತೆಯ ಸರಳತೆ ಅವರ ನಡೆನುಡಿ, ಬರಹದಲ್ಲಿಯೂ ಇತ್ತು. ಯಾರನ್ನು, ಯಾವುದನ್ನು ಕುರಿತಾದರೂ ಭಿನ್ನಾಭಿಪ್ರಾಯವನ್ನು ಹೇಳಿಕೊಳ್ಳಬೇಕಾದರೆ, ನಮ್ಮ ಗೆಳೆಯರಲ್ಲಿಯೆ ಕೆಲವರು ಮಾಡುವಂತೆ, ಅವರಲ್ಲಿ ಬೈಗುಳದ ಮಾತು, ವಿಕಟ–ವಿಕಾರವಾದ ವ್ಯಂಗ್ಯ, ತರ್ಕಹೀನವಾದ ಆಪಾದನೆ ಇರುತ್ತಿರಲಿಲ್ಲ. ಆಪ್ತವಾದೊಂದು ಸಂವಾದದಲ್ಲಿಯೋ, ಸಾರ್ವಜನಿಕ ಸಭೆಯಲ್ಲಿಯೋ ನಾವು ಒಪ್ಪದಿರುವುದನ್ನು ಯಾರಾದರೂ ಹೇಳಿದರೆ, ನಮ್ಮಲ್ಲಿ ಹಲವರು 'ನೀವು ಹಾಗೆಲ್ಲ ಮಾತಾಡಬಾರದು!' ಎಂದೋ 'ಅವರು ಹಾಗೆಲ್ಲ ಮಾತಾಡಬಾರದಿತ್ತು!' ಎಂದೋ ಆಕ್ರೋಶ–ಅಸಹನೆಯಿಂದ ಹೇಳುವುದಿದೆಯಷ್ಟೆ. ರಾಜಶೇಖರರೊಂದಿಗಿನ ನಲವತ್ತು ವರ್ಷಗಳ ಒಡನಾಟದಲ್ಲಿ ನಾನು ಅವರಲ್ಲಿ ಎಂದೂ ಅಂಥ ಧೋರಣೆ ಕಂಡಿಲ್ಲ, ಅವರು ಅಂಥ ಮಾತಾಡಿದ್ದು ಕೇಳಿಲ್ಲ.

ಅಂಥ ಸಂದರ್ಭದಲ್ಲಿ ಅವರು, 'ಇಲ್ಲ, ನಾನು ನಿಮ್ಮ ಮಾತನ್ನು ಒಪ್ಪೋದಿಲ್ಲ. ಐ ಡಿಸಗ್ರೀ ವಿಥ್ ಯೂ' ಎಂದು, ಆಯಾ ಸಂದರ್ಭಕ್ಕೆ ತಕ್ಕಂತೆ, ತಣ್ಣಗೆ ಇಲ್ಲವೆ ಕಟ್ಟುನಿಟ್ಟು–ಖಡಕ್ ಆಗಿ ಹೇಳಿ, ತಮ್ಮ ಅಭಿಪ್ರಾಯಭೇದದ ಕಾರಣಗಳನ್ನು ತಾರ್ಕಿಕವಾಗಿ ವಿವರಿಸುವ ಪ್ರಯತ್ನ ಮಾಡುತ್ತಿದ್ದರಷ್ಟೇ ಹೊರತು, 'ನೀವು ಹೀಗೆಲ್ಲ ಹೇಳಬಾರದು' ಎಂದು ಜುಲುಮೆ ಮಾಡುತ್ತಿರಲಿಲ್ಲ. ಅಷ್ಟರಮೇಲೆ, ಒಂದು ವೇಳೆ, ತಮ್ಮ ಅಭಿಪ್ರಾಯವೇ ತಪ್ಪಾದದ್ದಿತ್ತು ಎಂದು ಅವರಿಗೆ ಅನ್ನಿಸಿದರೆ, ಅಥವಾ ತಿಳಿದರೆ, ಆಗ, ತಡಮಾಡದೆ, ಯಾವ ಸಂಕೋಚವೂ ಇಲ್ಲದೆ, 'ಛೇ, ನಾನು ತಪ್ಪು ತಿಳಿದಿದ್ದೆ. ನೀವು ಹೇಳಿದ್ದು ಸರಿ. ಐ ಸ್ಟ್ಯಾಂಡ್ ಕರೆಕ್ಟೆಡ್,' ಎಂದು ಒಪ್ಪಿಕೊಳ್ಳುತ್ತಿದ್ದರು. ಹಾಗೆ, ಸಂವಾದ–ವಾಗ್ವಾದದ ಧರ್ಮಸೂಕ್ಷ್ಮಗಳನ್ನು ಅರಿತ ನಿಜವಾದ ಧರ್ಮಿಷ್ಠನ ನಡೆ ಆಗಿತ್ತು ಅವರದ್ದು.

ನಮ್ಮ ದೇಶದಲ್ಲಿ ಸಂಘ ಪರಿವಾರದ ಫ್ಯಾಸಿಸ್ಟ್ ಮನಃಸ್ಥಿತಿ ಮೇಲುಗೈ ಪಡೆದಿರುವ ಈ ಸಮಯದಲ್ಲಿ, ವಿವೇಕಯುತ ಇಸ್ಲಾಂಧರ್ಮಕ್ಕೆ ವಿರುದ್ಧವಾದ ಇಸ್ಲಾಂವಾದ (Islamism) ಅನ್ನುವುದು ಹಲವೆಡೆ ಕಾಣಿಸಿಕೊಂಡಿರುವ ಈ ಸಮಯದಲ್ಲಿ, ಮತ್ತು ತಥಾಕಥಿತ ಪ್ರಗತಿಪರರು, ಎಡಪಂಥೀಯರು ಎನಿಸಿಕೊಳ್ಳುವ ಕೆಲವರ ನಿಲುವು, ನುಡಿಗಟ್ಟಿನಲ್ಲಿಯೂ ಹಟಮಾರಿತನ, ಅವಿವೇಕ, ಒರಟಾದ ವರಸೆ ಕಾಣಿಸಿಕೊಂಡಿರುವ ಈ ಸಮಯದಲ್ಲಿ ರಾಜಶೇಖರರು ಪಾಲಿಸುತ್ತ ಬಂದಿದ್ದ ಆ ಧರ್ಮದ ಮಹತ್ವವೇನು ಎಂದು ವಿವರಿಸಬೇಕಾದ್ದಿಲ್ಲ.

ರಾಜಶೇಖರರ ಈ ಮನೋಧರ್ಮವು ಸಾಹಿತ್ಯದ ಅವರ ಓದಿನ ವಿಷಯದಲ್ಲಿಯೂ ಕಾಣಿಸುತ್ತಿತ್ತು. 'ನನ್ನ ರಾಜಕೀಯ, ಸೈದ್ಧಾಂತಿಕ ನಿಲುವುಗಳನ್ನಷ್ಟೆ ಬಿಂಬಿಸುವ ಕಥೆ, ಕಾದಂಬರಿ, ಕಾವ್ಯದಲ್ಲಿ ನನಗೆ ಅಂಥ ಆಸಕ್ತಿ ಇಲ್ಲ. ಆ ನಿಲುವುಗಳನ್ನು ನೆಚ್ಚಿಕೊಂಡು ಸಾಹಿತ್ಯಕೃತಿಯೊಂದಕ್ಕೆ ಬೆಲೆ ಕಟ್ಟುವುದು